# ಗೋ ವಿಶ್ವ

Cow Universe

ಗौ विश्व

ಸರ್ವಧಾರಿ ಸಂವತ್ಸರ | ಜ್ಯೇಷ್ಠ | ಜೂನ್ ೨೦೦೮ | ಸಂಪುಟ–೨ | ಸಂಚಿಕೆ–೬


ಗುರುವಾಣಿ

## ಧರ್ಮ ಚಿಂತನೆಗೆ ಚಾತುರ್ಮಾಸ್ಯ ಕಾಲ ಸಕಾಲ



ಮತ್ತೊಂದು ಚಾತುರ್ಮಾಸ್ಯ ಕಾಲ ಸನ್ನಿಹಿತವಾಗಿದೆ. ಧರ್ಮಾಧರ್ಮ ಚಿಂತನೆಯ, ಸಮಾಜ ವಿಮರ್ಶೆಯ ಸತ್ಕಾರ್ಯಕ್ಕೆ ಇದು ಸಕಾಲ. ಸಾರ್ವಕಾಲಿಕ ಸತ್ಯದ ಪುನರ್‌ಸ್ಮರಣೆಯ ದೃಷ್ಟಿಯಿಂದ ನಮ್ಮ ಹಿರಿಯರು ಇಂಥ ಅನೇಕ ಪರ್ವಕಾಲಗಳನ್ನು ನಿಗದಿಪಡಿಸಿದ್ದಾರೆ. ಎಷ್ಟೋ ಸಂದರ್ಭಗಳಲ್ಲಿ ಕಾಲಕ್ಕನುಗುಣವಾಗಿ ಧರ್ಮವೂ ವಿಮರ್ಶೆಗೊಳಪಡಬೇಕಾಗುತ್ತದೆ. ಅದು ಕಾಲಧರ್ಮ. ಕಾಲ ಬದಲಾದಂತೆಲ್ಲ ಎಂದೋ ಪ್ರತಿಪಾದಿಸಿದ ಜೀವನಕ್ರಮವನ್ನೇ ಇಂದಿಗೂ ಪಾಲಿಸುವುದು ಧರ್ಮವಾಗಲಾರದು. ಹಾಗೆ ಧರ್ಮದ ಮರುವ್ಯಾಖ್ಯಾನಕ್ಕೆ ಮುನ್ನ ತಜ್ಞರು, ಚಿಂತಕರು, ವಿದ್ವಜ್ಜನರ ನಡುವೆ ಸಾಕಷ್ಟು ಚಿಂತನ ಮಂಥನ ನಡೆಯುವುದು ಅಪೇಕ್ಷಣೀಯ. ಅಂಥ ವಿಚಾರ ಮಂಥನಕ್ಕೆ ಚಾತುರ್ಮಾಸ್ಯ ವೇದಿಕೆಯೊದಗಿಸುತ್ತದೆ.

ಇಲ್ಲೊಂದು ಜಿಜ್ಞಾಸೆ. ಧರ್ಮ ಎಂದರೇನು? ಇದೇಕೆ ಬದಲಾಗಬೇಕು? ಸಂದೇಹ ಸಹಜ. ಚಿಕ್ಕ ಉದಾಹರಣೆಯೊಂದು ನಮಗೆ ನೆನಪಿಗೆ ಬರುತ್ತದೆ. ನಿಮಗೆಲ್ಲ ಗೊತ್ತೇ ಇದೆ. ಸತ್ಯ ಪಾಲನೆ ಧರ್ಮ. ಅನೃತ ಧರ್ಮಕ್ಕೆ ವಿರುದ್ಧವಾದದ್ದು. ಆದರೆ ಸನ್ನಿವೇಶಕ್ಕನುಗುಣ ಅಪ್ರಿಯ ಸತ್ಯವೂ ಅಧರ್ಮವಾಗುತ್ತದೆ. ಇದನ್ನೊಂದಿಷ್ಟು ವಿವರಿಸುತ್ತೇವೆ.

ಒಮ್ಮೆ ಒಂದು ಗುರುಕುಲದಲ್ಲಿ ಶಿಷ್ಯ ಸಮೂಹಕ್ಕೆ ಋಷಿಯೊಬ್ಬರು ಬೋಧನಾನಿರತರಾಗಿದ್ದರು. ಶಿಷ್ಯರು ತದೇಕಚಿತ್ತದಿಂದ ಪಾಠಕೇಳುತ್ತಿದ್ದರು. ಇದ್ದಕ್ಕಿದ್ದಂತೆ ಒಂದು ಗೋವು ಜೀವಭಯದಲ್ಲಿ ಆರ್ತನಾದ ಮಾಡುತ್ತ ಬಾಲವನ್ನೆತ್ತಿಕೊಂದು ಓಡಿಬಂದು, ಅತ್ಯಂತ ದೈನ್ಯ ಭಾವದಲ್ಲಿ ಆ ಮುನಿಯ ಬಲ ಪಾರ್ಶ್ವಕ್ಕೆ ಬಂದು ನಿಂತಿತು. ಪಾಠವನ್ನು ಮೊಟಕುಗೊಳಿಸಿದ ಗುರುಗಳು ಗೋವನ್ನು ಸಂತೈಸಿ, ಒಂದಷ್ಟು ನೀರುಕೊಟ್ಟು, ಗೋಗ್ರಾಸ ದಾನ ಮಾಡಿ ತಮ್ಮ ಕುಟೀರದ ಹಿಂಬದಿಯಲ್ಲಿ ಹುಲ್ಲುಹಾಸಿ ಆಶ್ರಯ ನೀಡಿದರು.

ಇನ್ನೇನು ಪಾಠ ಮುಂದುವರಿಸಬೇಕೆನ್ನುವಷ್ಟರಲ್ಲಿ ಗೋವನ್ನು ಅರಸುತ್ತ ಕಟುಕನೊಬ್ಬ ಓಡೋಡಿ ಬಂದ. ಮುನಿಯನ್ನು ನೋಡುತ್ತಲೇ ಈ ದಾರಿಯಲ್ಲಿ ಒಂದು ಹಸು ಓಡಿ ಬಂತೇ? ನಾನದನ್ನು ಬೆಳಗ್ಗೆಯಷ್ಟೇ ನೂರು ವರಹ ಕೊಟ್ಟು ಖರೀದಿಸಿದ್ದೆ. ಅದನ್ನು ಕಡಿದು ಮಾಂಸವನ್ನು ಮಾರಬೇಕು. ಗಿರಾಕಿಗಳು ಕಾಯುತ್ತಿದ್ದಾರೆ. ನೀವದನ್ನು ನೋಡಿದ್ದೀರಾ? ಎಂದು ಪ್ರಶ್ನಿಸಿದ ಕಟುಕ.

### ಹೂರಣ


ಗುರುವಾಣಿ

ಪ್ರಶ್ನೋತ್ತರ

ಗೋಮಾಂಸ ಭಕ್ಷಕರೇ ಎಚ್ಚರಿಕೆ

ಮಾಸದ ಗೋವು: ದೇವನಿ

ಕವನ ಹಾಗೂ ಚುಟುಕಗಳು

ಕೃಷಿ ಕಾರ್ಯದಲ್ಲಿ ಗೋವಿನ ಬಳಕೆ ಹಿಂದೆ ಹೇಗಿತ್ತು? ಈಗ ಹೇಗಿದೆ? ಏನಾಗಬೇಕಿದೆ?



ಪ್ರಕಾಶನ: IT4COW ಸಂಘಟನೆ

groups.yahoo.com/group/IT4COW

ಅಂತರಜಾಲ ತಾಣ: vishwagou.org

ಸಂಪರ್ಕ: govishva@gmail.com




ಗುರುಗಳು ಒಂದು ಕ್ಷಣ ಆಶ್ಚರ್ಯದಿಂದ ಸ್ಥಂಬಿಭೂತರಾದರು. ಜಿಜ್ಞಾಸೆಗೆ ಬಿದ್ದರು. ಸಾವರಿಸಿಕೊಂಡು "ಗೋವು ಇತ್ತ ಓಡಿ ಬಂದದ್ದು ನಿಜ. ನಂತರ ಎಲ್ಲಿ ಹೋಯಿತೆಂಬುದನ್ನು ಗಮನಿಸಿಲ್ಲ. ಬಹುಶಃ ಹೀಗೆಯೇ ಮುಂದೆ ಹೋಗಿರಬೇಕು" ಎಂದು ಇನ್ನೊಂದು ಪಾರ್ಶ್ವ ತೋರಿದರು. ಕಟುಕ ಅತ್ತ ಹೊರಟುಹೋದ. ಬಳಿದ ಶಿಷ್ಯರು ಪ್ರಶ್ನಿಸಿದರು. "ಗೋವನ್ನು ನಿಮ್ಮಲ್ಲೇ ಇಟ್ಟುಕೊಂಡು ಸುಳ್ಳು ಹೇಳಿದ್ದೇಕೆ. ಇದು ಅಧರ್ಮವಲ್ಲವೇ?" ಎಂದು ಸಂದೇಹಿಸಿದರು.

ಗುರುಗಳು ನಸುನಕ್ಕು ಹೇಳಿದರು. "ನಿಜ ಶಿಷ್ಯರೇ. ಅನೃತ ಖಂಡಿತಾ ದರ್ಮ ವಿರೋಧಿ. ಆದರೆ 'ಮಾಬ್ರೂಯಾತ್ ಸತ್ಯಮಪ್ರಿಯಮ್' ಎಂಬ ಮಾತೊಂದಿದೆ. ನಮ್ಮ ಆತ್ಮಕ್ಕೆ ಅಪ್ರಿಯವಾದ ಸತ್ಯವನ್ನೂ ಹೇಳಬಾರದು. ನಾನು ಗೋವನ್ನು ಇಲ್ಲೇ ಇದೆ ಎಂದು ಹೇಳಿದ್ದರೆ, ಆತ ಅದನ್ನು ಕೊಂಡೊಯ್ದು ಕಡಿದು ಮಾಂಸ ಮಾರುತ್ತಿದ್ದ. ಒಂದು ಜೀವದ ಸಾವಿಗೆ ನಾನು ಕಾರಣವಾಗುತ್ತಿದ್ದೆ. ಜೀವ ಉಳಿಸುವ, ಜೀವ ಸೃಷ್ಟಿಯ ಶಕ್ತಿ ನಮಗಿಲ್ಲ ಎನ್ನುವುದಾದರೆ ಅದನ್ನು ಕೊಲ್ಲುವ, ಕೊಲ್ಲಿಸುವ ಹಕ್ಕ ನಮಗೆಲ್ಲಿದೆ? ಜೀವ ಕೊಟ್ಟವರೂ ನಾವಲ್ಲ, ಕೊಲ್ಲುವ ಅಧಿಕಾರವೂ ನಮಗಿಲ್ಲ" ಎಂದರು.

ಹಾಗಾದರೆ ಸುಳ್ಳು ಹೇಳುವುದು ಸರಿಯೇ? ಪ್ರಶ್ನೆ ಸಹಜ. ಆದರೆ ಅಂಥ ಸಂದರ್ಭದಲ್ಲಿ ಸತ್ಯ ಹೇಳುವುದರಿಂದ ಆಗುವ ಅಧರ್ಮಕ್ಕಿಂತ ಸುಳ್ಳು ಹೇಳಿ ನಿಷ್ಪಾಪಿ ಗೋವಿನ ರಕ್ಷಣೆ ಮಾಡಿದ್ದು ದೊಡ್ಡದಾಗುತ್ತದೆ. ಹೀಗೆ ಧರ್ಮದ ವ್ಯಾಖ್ಯೆ ಸಂದರ್ಭಕ್ಕೆ ತಕ್ಕಂತೆ ಬದಲಾಗಬೇಕು. ಧರ್ಮದ ಮೂಲವನ್ನು, ಸೂಕ್ಷ್ಮವನ್ನು ಅರಿಯಲು ಪ್ರಯತ್ನಿಸಿದರೆ ತಂತಾನೇ ಧರ್ಮರಕ್ಷಣೆಯಾಗುತ್ತದೆ. ಅಂಥ ಮಹತ್ಕಾರ್ಯಕ್ಕೆ ಧರ್ಮಭೂಮಿಯೆನಿಸಿದ ಈ ಭರತಖಂಡವೇ ನೆಲೆಯಾಗಬೇಕು. ನಾವು ನೀವು ಅದರ ರಕ್ಷಣೆಯ ಸೈನಿಕರಾಗೋಣ.

ವಂದೇ ಗೋ ಮಾತರಮ್

**– ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**
**ಶ್ರೀ ರಾಮಚಂದ್ರಾಪುರ ಮಠ**

# ಪ್ರಶ್ನೋತ್ತರ

ಪ್ರ: ಗೋಹತ್ಯೆ ತಡೆಗಟ್ಟಲು ನಾಗರಿಕರು ಏನು ಮಾಡಬಹುದು ?

ಉ: ಗೋಸಂರಕ್ಷಣೆ ಕೇವಲ ಹಿಂದುಗಳ ಧಾರ್ಮಿಕ ಅಗತ್ಯವಲ್ಲ. ಅದಕ್ಕಿಂತ ಹೆಚ್ಚಾಗಿ ಅದು ಭಾರತೀಯ ಆರ್ಥಿಕತೆಯ ಅಗತ್ಯ ಎಂಬುದನ್ನು ನಾವು ಮನಗಾಣಬೇಕು. ಆರ್ಥಿಕತೆ ಎಂಬುದು ಹಿಂದು, ಮುಸಲ್ಮಾನ, ಕ್ರೈಸ್ತ ಮುಂತಾದ ಎಲ್ಲಾ ಮತ ಧರ್ಮಗಳನ್ನು ಮೀರಿದ್ದು. ಗೋ ಸಂರಕ್ಷಣೆ ಆರ್ಥಿಕ ವಿವೇಕ. ಗೋವಧೆ ಆರ್ಥಿಕ ಅವಿವೇಕ. ಈ ಪ್ರಜ್ಞೆ ಎಲ್ಲರಲ್ಲಿ ಮೂಡಿದಾಗ ಗೋಸಂರಕ್ಷಣೆ ಎಂಬುದು ಕೇವಲ ಹಿಂದುಗಳ ಅಜೆಂಡಾ ಆಗಿ ಉಳಿಯುವುದಿಲ್ಲ. ಅದು ಭಾರತದ ಪ್ರಜೆಗಳ ಅಜೆಂಡಾ ಆಗುತ್ತದೆ. ಗೋಮಯ ಮತ್ತು ಗೋಮೂತ್ರಗಳನ್ನು ವ್ಯಾಪಕವಾಗಿ ಕೃಷಿ, ಔಷಧಗಳು, ಗೋಬರ್ ಗ್ಯಾಸ್, ವಿದ್ಯುತ್ ಉತ್ಪಾದನೆ ಮುಂತಾದ ಕ್ಷೇತ್ರದ ಬಳಕೆ ಮಾಡಲು ಪ್ರಾರಂಬಿಸಬೇಕು.

ಪ್ರ: ಭಾರತೀಯರ ಗೋ ಹತ್ಯೆ ವಿರೋಧ ಕೇವಲ ಭಾವನಾತ್ಮಕವೆ ?

ಉ: ಭಾವನಾತ್ಮಕತೆಯೇ ಮನುಷ್ಯನನ್ನು ಮೃಗಗಳಿಂದ ಬೇರ್ಪಡಿಸುವುದು. ಆದರೆ ಭಾರತೀಯರ ಗೋ ಪ್ರೇಮಕ್ಕೆ ಬಲವಾದ ಆರ್ಥಿಕ ತಳಹದಿಯೂ ಇದೆ. ದೇಸೀ ಹಸುವಿನ ಹಾಲು ತಾಯಿಯ ಹಾಲಿಗೆ ಅತ್ಯಂತ ಸಮೀಪವಾದುದು. ಸ್ವಾತಂತ್ರ್ಯನಂತರದ ಈ ಅರವತ್ತು ವರ್ಷಗಳನ್ನು ಹೊರತುಪಡಿಸಿದರೆ, ಸಹಸ್ರಾರು ವರ್ಷಗಳ ಕಾಲ ಭಾರತೀಯ ಕೃಷಿ ಗೋ ಆಧಾರಿತವೇ ಆಗಿತ್ತು. ಎತ್ತುಗಳು ಕೃಷಿ ಹಾಗೂ ಗ್ರಾಮೀಣ ಸಾರಿಗೆಯ ಮೂಲಾಧಾರವಾಗಿದ್ದವು. ಗೋಮಯ ಹಾಗೂ ಗೋಮೂತ್ರದ ಬಳಕೆ ಕೃಷಿಯಲ್ಲಿ ಹಾಗೂ ಆರೋಗ್ಯ ಪಾಲನೆಯಲ್ಲಿ ವ್ಯಾಪಕವಾಗಿತ್ತು. ಭಾರತೀಯರ ಗೋಹತ್ಯಾ ವಿರೋಧ ಕೇವಲ ಭಾವುಕತೆ ಅಲ್ಲ.

ಪ್ರ: ಮುಸಲ್ಮಾನರಿಗೆ ಗೋ ಹತ್ಯೆ ಮತ್ತು ಗೋ ಮಾಂಸದ ಭಕ್ಷಣೆ ಧಾರ್ಮಿಕ ಅವಶ್ಯಕತೆ ಎನ್ನುತ್ತಾರಲ್ಲ ?

ಉ: ೨೬–೧೦–೨೦೦೫ ರಂದು ಸುಪ್ರೀಂ ಕೋರ್ಟಿನ ಸಂವಿಧಾನ ಪೀಠವು ಗೋ ಹತ್ಯಾ ನಿಷೇಧದ ಸಂಬಂಧ ನೀಡಿದ ತೀರ್ಪಿನಲ್ಲಿ ಬಕ್ರೀದ್ ಹಬ್ಬದ ದಿನ ಹಸುವನ್ನು ಬಲಿ ಕೊಡುವುದು ಮುಸಲ್ಮಾನರಿಗೆ ಕಡ್ಡಾಯ ಎಂಬ ವಾದಕ್ಕೆ ಯಾವುದೇ ಧಾರ್ಮಿಕ ಸಾಕ್ಷಿ ಪುರಾವೆಗಳಿಲ್ಲ ಎಂದು ತಳ್ಳಿ ಹಾಕಿದೆ. ಅದಕ್ಕೆ ವಿರುದ್ಧವಾಗಿ ಬಾಬರ್, ಹುಮಾಯೂನ್, ಅಕ್ಬರ್, ಜಹಾಂಗೀರ್ ಮುಂತಾದ ಮೊಗಲ್ ಸಾಮ್ರಾಟರು ಗೋಹತ್ಯೆ ಮಾಡುವವರಿಗೆ ಅತ್ಯಂತ ಕಠಿಣ ಶಿಕ್ಷೆ ವಿಧಿಸುತ್ತಿದ್ದರು. ಮೈಸೂರಿನ ನವಾಬ್ ಹೈದರ್ ಆಲಿ, ಗೋಹತ್ಯೆ ಮಾಡುವವರ ಕೈಗಳನ್ನು ಕತ್ತರಿಸಬೇಕೆಂದು ಶಾಸನ ವಿಧಿಸಿದ್ದ ಎಂದು ತಿಳಿಸುತ್ತದೆ.

**– ಪ್ರೊ. ಬಿ. ಎಂ. ಕುಮಾರಸ್ವಾಮಿ** (ಕೃಪೆ: ವಿಜಯ ಕರ್ನಾಟಕ) (ಸಂಗ್ರಹ: ಉಲ್ಲಾಸ್ ಸಿ. ಕೆ)

# ಗೋಮಾಂಸ ಭಕ್ಷಕರೇ ಎಚ್ಚರಿಕೆ

ತಲೆಬರೆಹ ಓದಿ ತಲೆಯನ್ನು ಕುಟ್ಟಿದಂತಾಯಿತೇ? ಅಲ್ಲ ಸ್ವಾಮಿ, ವಿಜ್ಞಾನದ ಬ್ಲಾಗ್‍ನಲ್ಲಿ ರಾಜಕೀಯ ಬಂದಂತಿದೆಯಲ್ಲ, ಎಂದಿರಾ? ಇಲ್ಲ, ಸ್ವಾಮಿ. ಖಂಡಿತ ಇಲ್ಲ. ನಮ್ಮ ಹಿಂದುತ್ವವಾದಿಗಳು ಅಮೆರಿಕನ್ನರನ್ನು ಇನ್ನು ಜರೆಯುವುದು ಬಿಟ್ಟು ಹೊಗಳಲು ಆರಂಭಿಸಬೇಕು, ಅಷ್ಟೆ. ಏಕೆಂದರೆ ಮೊನ್ನೆ ತಾನೆ ಅಲ್ಲಿನ ರಾಜ್ಯದ ಸಂಸತ್ತು ಒಂದರಲ್ಲಿ ವೇದಪಠಣ ಆಗಿತ್ತು. ಈಗ ಅಮೆರಿಕೆಯ ರೋಚೆಸ್ಟರ್ ವೈದ್ಯಕೀಯ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಗೋಮಾಂಸ ಭಕ್ಷಕರಿಗೆ ಎಚ್ಚರಿಕೆ ನೀಡಿದ್ದಾರೆ. ಗೋಮಾಂಸ ತಿನ್ನುವ ತಾಯಂದಿರ ಗಂಡು ಮಕ್ಕಳು ವೀರ್ಯಹೀನರಾಗುವ ಸಾಧ್ಯತೆಗಳಿವೆ ಎಂದು ವಿಶ್ವವಿದ್ಯಾನಿಲಯದ ಪ್ರಕಟಣೆ ತಿಳಿಸಿದೆ.

ರೋಚೆಸ್ಟರ್ ವೈದ್ಯಕೀಯ ವಿಶ್ವವಿದ್ಯಾನಿಲಯದ ರಿಪ್ರೊಡಕ್ಟಿವ್ ಎಪಿಡೆಮಿಯೊಲಜಿ ಸೆಂಟರ್‍ನ ನಿರ್ದೇಶಕರಾದ ಶಾನ್ನ ಎಚ್. ಸ್ವಾನ್ ತಮ್ಮ ಸಂಗಡಿಗರ ಜೊತೆಗೂಡಿ ಈ ಪ್ರಮುಖ ಸಂಶೋಧನೆ ಮಾಡಿದ್ದಾರೆ. ಇದರ ವಿವರಗಳನ್ನು ಜರ್ನಲ್ ಆಫ್ ಹ್ಯೂಮನ್ ರಿಪ್ರೊಡಕ್ಷನ್‍ನ ಮಾರ್ಚ್ ೨೮ರ ಸಂಚಿಕೆಯಲ್ಲಿ ವರದಿ ಮಾಡಲಾಗಿದೆ.

ಗರ್ಭಿಣಿ ಹೆಂಗಸರು ದನದ ಮಾಂಸ ತಿನ್ನುವುದರಿಂದ ಅಪಾಯವೇನಾದರೂ ಇದೆಯೇ ಎನ್ನುವ ನಿಟ್ಟಿನಲ್ಲಿ ಈ ಸಂಶೋಧನೆ ನಡೆದಿತ್ತು. ಒಟ್ಟು ೩೮೭ ಗಂಡಸರಿಂದ ಅವರು ಉತ್ಪಾದಿಸುವ ವೀರ್ಯದ ಪ್ರಮಾಣ, ವೀರ್ಯದಲ್ಲಿರುವ ವೀರ್ಯಾಣುವಿನ ಸಂಖ್ಯೆ, ಈ ವೀರ್ಯಾಣುಗಳ ಸಂತಾನ ಸಾಮರ್ಥ್ಯ ಇತ್ಯಾದಿ ಮಾಹಿತಿಯನ್ನು ಸಂಗ್ರಹಿಸಲಾಯಿತು. ಈ ಎಲ್ಲ ಮಾಹಿತಿಯನ್ನೂ ಅವರ ತಾಯಂದಿರು ಗರ್ಭಿಣಿಯಾಗಿದ್ದಾಗ ಎಷ್ಟು ದನದ ಮಾಂಸ ತಿಂದಿದ್ದರೆನ್ನುವ ಮಾಹಿತಿಯ ಜೊತೆಗೆ ತಾಳೆ ಹಾಕಲಾಯಿತು. ಉಳಿದೆಲ್ಲ ವಿಷಯಗಳೂ ಸಮಾನವಾಗಿದ್ದಾಗ, ತಾಯಂದಿರ ದನದ ಮಾಂಸ ಸೇವನೆಯ ಪ್ರಮಾಣಕ್ಕೆ ಅನುಗುಣವಾಗಿ ಈ ಗಂಡಸರ ವೀರ್ಯದಲ್ಲಿನ ವೀರ್ಯಾಣುಗಳ ಪ್ರಮಾಣ ಕಡಿಮೆಯಾಗುತ್ತಿತ್ತು ಎಂದು ಸ್ವಾನ್ ತಂಡ ಹೇಳಿದೆ. ಅರ್ಥಾತ್, ಕಡಿಮೆ ದನದ ಮಾಂಸ ತಿಂದ ತಾಯಂದಿರ ಮಕ್ಕಳ ವೀರ್ಯದಲ್ಲಿನ ಪ್ರಮಾಣಕ್ಕೆ ಹೋಲಿಸಿದರೆ, ಹೆಚ್ಚು ದನದ ಮಾಂಸ ತಿಂದ ತಾಯಂದಿರ ಗಂಡು ಮಕ್ಕಳ ವೀರ್ಯದಲ್ಲಿ ವೀರ್ಯಾಣುಗಳ ಪ್ರಮಾಣ ಕಡಿಮೆ ಇತ್ತು.

ವೀರ್ಯೋತ್ಪಾದನೆ ಹುಡುಗರಿಗೆ ಮೀಸೆ ಬಲಿತಾಗ ಆಗುವುದಲ್ಲವೇ? ಗರ್ಭಿಣಿಯಾಗಿದ್ದಾಗ ತಾಯಿ ತಿನ್ನುವ ಆಹಾರಕ್ಕೂ, ಹತ್ತು–ಹದಿನೈದು ವರ್ಷಗಳ ಅನಂತರ ನಡೆಯುವ ವೀರ್ಯೋತ್ಪಾದನೆಗೂ ಸಂಬಂಧ ಎಲ್ಲಿಂದ ಎನ್ನುವ ಪ್ರಶ್ನೆ ಸಹಜವೇ. ಆದರೆ, ವೀರ್ಯೋತ್ಪಾದನೆಯ ಪ್ರಮುಖ ಘಟ್ಟ ಮೀಸೆ ಬಲಿತಾಗ ಆಗುವುದಿಲ್ಲ. ಭ್ರೂಣಾವಸ್ಥೆಯಲ್ಲಿಯೇ ಆಗುತ್ತದೆ ಎನ್ನುವುದು ವೈದ್ಯರ ಅಭಿಪ್ರಾಯ. ಗಂಡು ಮಕ್ಕಳ ವೀರ್ಯ ಜನಕಾಂಗದಲ್ಲಿನ ವೀರ್ಯಜನಕ ಕೋಶಗಳ ಅಥವಾ ಹೆಣ್ಣು ಮಕ್ಕಳಾದಲ್ಲಿ ಅಂಡಾಣುಗಳ ಸಂಖ್ಯೆ ಮಗು ತಾಯಿ ಗರ್ಭದಲ್ಲಿ ಇರುವಾಗಲೇ ನಿರ್ಣಯಿಸಲ್ಪಡುತ್ತದೆ. ಇದರಲ್ಲಿ ಹೆಚ್ಚು, ಕಡಿಮೆ ಆದರೆ ಅದರ ಪರಿಣಾಮ ಪ್ರಾಯ ಬಂದ ಮೇಲೆ ತೋರುತ್ತದೆ.

ಸ್ವಾನ್ ತಂಡ ಅಧ್ಯಯನ ಮಾಡಿದ ಗಂಡಸರಲ್ಲಿ ವೀರ್ಯಾಣುಗಳ ಸರಾಸರಿ ಸಂಖ್ಯೆ ಶೇಕಡ ೧೮ರಷ್ಟು ಮಂದಿಯಲ್ಲಿ ಬಲು ಕಡಿಮೆ ಇತ್ತು. ಅತಿ ಗೋಮಾಂಸ ಭಕ್ಷಕರಾಗಿಲ್ಲದ ತಾಯಂದಿರ ಮಕ್ಕಳಲ್ಲಿ ಕೇವಲ ಶೇಕಡ ೫ರಷ್ಟು ಮಂದಿಯಷ್ಟೆ ವೀರ್ಯಾಣುಗಳ ಕೊರತೆಯನ್ನು ಅನುಭವಿಸಿದ್ದರು. ಅರ್ಥಾತ್, ಗೋಮಾಂಸ ಹೆಚ್ಚು ಬಳಸಿದ ತಾಯಂದಿರ ಮಕ್ಕಳಲ್ಲಿ ಹೆಚ್ಚಿನವರ ವೀರ್ಯದಲ್ಲಿ ಕೊರತೆ ಇತ್ತು. ಪ್ರತಿ ಮಿ.ಲೀ. ವೀರ್ಯದಲ್ಲಿ ಸುಮಾರು ೧೧ ಲಕ್ಷದಿಂದ ೨೦ ಲಕ್ಷ ವೀರ್ಯಾಣುಗಳಿದ್ದಲ್ಲಿ ಗರ್ಭಧಾರಣೆ ಆಗುವ ಸಾಧ್ಯತೆಗಳು ಹೆಚ್ಚುತ್ತವೆ ಎನ್ನುವುದು ವೈದ್ಯರ ಅನುಭವ.

ಮಾನವ ಸಂತಾನದ ವೀರ್ಯವನ್ನು ಬಾಧಿಸುವಂತಹದ್ದು ದನದ ಮಾಂಸದಲ್ಲೇನಿದೆ ಎನ್ನುವ ಪ್ರಶ್ನೆ ಬಂತೇ? ಅದಿನ್ನೂ ತಿಳಿದಿಲ್ಲ. ದನ ಕೊಬ್ಬಿ ಹೆಚ್ಚೆಚ್ಚು ಮಾಂಸ ಕೊಡಲೆಂದು ಬಳಸುವ ಸಾಕಣೆಯ ಕೆಲವು ವಿಧಾನಗಳಿಂದಾಗಿ ಈ ಪರಿಣಾಮ ಆಗಿರಲಿಕ್ಕೂ ಸಾಕು. ಸುಮಾರು ೨೦ ವರ್ಷಗಳ ಹಿಂದೆ ಹೀಗೆಯೇ ದನದ ಮಾಂಸ ತಿಂದು ಬೆಳೆದ ಹುಡುಗಿಯರಲ್ಲಿ ತಾಯಾಗುವ ಮೊದಲೇ ಮೊಲೆ ಹಾಲು ಸುರಿಯುವ ಘಟನೆಗಳು ಜರುಗಿದ್ದುವು. ದನಗಳು ಕೊಬ್ಬಿ ಬೆಳೆಯಲೆಂದು ಅವುಗಳಿಗೆ ಉಣಿಸುತ್ತಿದ್ದ ಸೊಮಾಟೊಸ್ಟಾಟಿನ್‍ಎನ್ನುವ ರಾಸಾಯನಿಕ, ಮಾಂಸದಲ್ಲಿ ಒಟ್ಟಾಗಿ ತನ್ಮೂಲಕ ಮಕ್ಕಳ ದೇಹ ಸೇರಿ ಅಲ್ಲಿ ದುಷ್ಪರಿಣಾಮ ಬೀರಿತ್ತು ಎಂದು ತಿಳಿಯಲಾಗಿತ್ತು. ಅಂದಿನಿಂದ, ದನಗಳಿಗೆ ಉಣಿಸುವ, ಚುಚ್ಚುವ ಹಾರ್ಮೋನುಗಳ ಪ್ರಮಾಣದ ಮೇಲೆ ಬಿಗಿ ನಿರ್ಬಂಧವನ್ನೂ ಹೇರಲಾಗಿತ್ತು. ಹತ್ತು ವರ್ಷಗಳ ಹಿಂದೆ ಹೆಚ್ಚಿನ ಪೌಷ್ಟಿಕತೆ ಇರಲಿ ಎಂದು ದನಗಳಿಗೆ ಮೇವಿನಲ್ಲಿ ಕುರಿಗಳ ಮಿದುಳಿನ ಪುಡಿಯನ್ನು ಬೆರೆಸಿ ಕೊಡಲಾಗುತ್ತಿತ್ತು. ಇದರಿಂದಾಗಿ ದನಗಳಿಗೆ ಸ್ಕ್ರೇಪಿ ಎನ್ನುವ ಮಿದುಳುಕ್ಷಯ ಅಂಟಿಕೊಂಡದ್ದೂ, ಲಕ್ಷಾಂತರ ದನಗಳನ್ನು ಅದಕ್ಕಾಗಿ ಕೊಂದು ಬಿಸಾಡಿದ್ದೂ ಚರಿತ್ರೆ.

ದನದ ಮಾಂಸ ತಿಂದ ಮಹಿಳೆಯರ ಮಕ್ಕಳಲ್ಲಿ ವೀರ್ಯಾಣು ಕಡಿಮೆಯಾಗುವುದಕ್ಕೂ ಇಂತಹುದೇ ಯಾವುದೋ ಕಾರಣ ಇರಬಹುದು ಎನ್ನುವ ಗುಮಾನಿ ಇದೆ. ಹಾಗೆಂದು ಈ ಗಂಡಸರೆಲ್ಲ ಸಂತಾನ ಹೀನರಾದರೆಂದುಕೊಳ್ಳಬೇಡಿ. ವೀರ್ಯಾಣುಗಳ ಸಂಖ್ಯೆ ಕಡಿಮೆ ಇದ್ದರೂ, ಫಲವತ್ತೆಯೇನೂ ಕಡಿಮೆ ಆಗಲಿಲ್ಲ. ಹೀಗಾಗಿ, ಗೋಮಾಂಸ ತಿನ್ನುವವರ ಸಂಖ್ಯೆ ಕಡಿಮೆ ಆಗುತ್ತದೆ ಎಂದು ದನದ ಮಾಂಸ ರುಚಿಸದವರು ಖುಷಿ ಪಡುವ ಹಾಗೂ ಇಲ್ಲ.

ಈ ಬಗ್ಗೆ ಹೆಚ್ಚಿನ ವಿವರಗಳನ್ನು ಯುರೇಕಾ ಅಲರ್ಟ್ (www.eurekalert.org/pub_releases/2007-03/uorm-mbd032607.php) ನಲ್ಲಿ ನೋಡಿ.

– **ಕೊಳ್ಳೆಗಾಲ ಶರ್ಮ**

(ಕೊಳ್ಳೆಗಾಲ ಶರ್ಮರ ವಿಜ್ಞಾನ ಬ್ಲಾಗ್ "ಇಂದಿನ ವಿಜ್ಞಾನ"ದಿಂದ – kollegala.wordpress.com)

ಮಾಸದ ಗೋವು

# ದೇವನಿ

ಅವತ್ತು ದಿನಾಂಕ ೨೯-೧೦-೧೯೯೩. ಮಧ್ಯಾಹ್ನ ಬಿರುಬಿಸಿಲು. ಮರಾಠಾವಾಡ ಪ್ರಾಂತ್ಯದ ಹಳ್ಳಿಗಳಲ್ಲಿ ಒಮ್ಮೆಗೆ ಕೊಟ್ಟಿಗೆಯಲ್ಲಿದ್ದ ಹಸುಗಳು ಗಾಬರಿಗೊಂಡಂತೆ, ಉದ್ರೇಕಗೊಂಡಂತೆ ವರ್ತಿಸಲಾರಂಬಿಸಿದವು. ಕಟ್ಟಿದ ಹಗ್ಗ ಕಿತ್ತು ಕೊಟ್ಟಿಗೆಯಿಂದ ಹೊರಗೋಡಲು ಯತ್ನಿಸಿದವು. ಇಡೀ ಹಳ್ಳಿಗೆ ಹಳ್ಳಿಯೆ ಹಸುಗಳ ಅಂಬಾಕಾರದಿಂದ ತುಂಬಿಹೋಯಿತು. ಜನರಿಗೆ ಆಶ್ಚರ್ಯವಾಯಿತಾದರೂ ಅದಕ್ಕೆ ಅಷ್ಟಾಗಿ ಮಹತ್ವ ನೀಡದೆ ಹಗ್ಗ ಬಿಚ್ಚಿಕೊಂಡು ಹೋದ ಹಸುಗಳನ್ನು ಮತ್ತೆ ಎಳೆತಂದು ಕಟ್ಟಿದರು. ಕೆಲವು ಮಾತ್ರ ಯಾರ ಕೈಗೂ ಸಿಗದೆ ತಪ್ಪಿಸಿಕೊಂಡವು.

ಹೀಗೆ ತಪ್ಪಿಸಿಕೊಂಡು ಹೋದ ಹಸುಗಳು ಮಾತ್ರ ೩೦ನೆ ತಾರೀಖಿನ ಮಧ್ಯಾಹ್ನವನ್ನು ನೋಡಿದವು. ಸೆಪ್ಟೆಂಬರ್ ೩೦ರ ಬೆಳಗಿನ ಜಾವ ಪ್ರದರ್ಶಿತವಾದ ಭೂತಾಯಿಯ ಕೋಪಕ್ಕೆ ೫೦ ಸಾವಿರಕ್ಕೂ ಹೆಚ್ಚು ಜನ ಬಲಿಯಾದರು. ಭೂಕಂಪದ ಮುನ್ಸೂಚನೆಯನ್ನು ನೀಡುವಷ್ಟು ವಿಜ್ಞಾನ ಇನ್ನೂ ಮುಂದುವರಿದಿಲ್ಲ. ಆದರೆ ಈ ಘೋರ ಭೂಕಂಪದ ಮುನ್ಸೂಚನೆ ಕೊಟ್ಟಿಗೆಯಲ್ಲಿದ್ದ ಹಸುಕರುಗಳಿಗೆ ಸಿಕ್ಕಿಬಿಟ್ಟಿತ್ತು. ಅದರಲ್ಲೂ ದೇವನಿ ಮತ್ತು ಒಂಗೋಲ್ ತಳಿಯ ಹಸುಗಳಂತೂ ಬಹಳ ಸ್ಪಷ್ಟವಾಗಿ ಮುನ್ಸೂಚನೆ ಪಡೆದುಕೊಂಡುಬಿಟ್ಟಿದ್ದವು. ಆದರೆ ಅದನ್ನು ಗಮನಿಸುವ ವ್ಯವಧಾನವಿಲ್ಲದೆ ಸಾವಿರ ಸಾವಿರ ಜನ ತಮ್ಮ ಅಮೂಲ್ಯಜೀವವನ್ನು ತಾವೇ ಕಟ್ಟಿದ ಮನೆಯ ಗೋಡೆ ಕಂಬಗಳಿಗೆ ಬಲಿಗೊಟ್ಟರು. ದೇವನಿ ತಳಿ ಪತ್ರಿಕೆಗಳಲ್ಲಿ ಪ್ರಮುಖ ಸ್ಥಾನ ಪಡೆಯಿತು.



ದೇವನಿ, ಮಹಾರಾಷ್ಟ್ರ, ಕರ್ನಾಟಕ

ಇಂಗ್ಲೀಶಿನಲ್ಲಿ Deoni ಆಗಿರುವ ದೇವನಿ, ೫೦೦ ವರ್ಷಗಳ ಹಿಂದಷ್ಟೇ ವ್ಯುತ್ಪನ್ನವಾದ ಭಾರತೀಯ ತಳಿ.

ಗೀರ್ ಹಾಗೂ ಡಾಂಗಿ ತಳಿಗಳಿಂದ ಅಭಿವೃದ್ಧಿಪಡಿಸಲಾದ ದೇವನಿ ಅಥವಾ 'ಡೊಂಗರಿ' ನೋಡಲಿಕ್ಕೂ ಹೆಚ್ಚುಕಮ್ಮಿ ಗೀರ್‌ನಂತೆಯೆ ಕಾಣುತ್ತದೆ. ಹಣೆ, ಕಿವಿ ಕೋಡುಗಳಂತೂ ಗೀರ್‌ನ ತದ್ರೂಪ.

ಅಂತೆಯೆ ಡಾಂಗಿಯ ಹೋಲಿಕೆ ಇರುವುದು ಒಟ್ಟಾರೆ ದೇಹ ಚಹರೆ ಹಾಗೂ ಉಗ್ರಸ್ವಭಾವದಲ್ಲಿ. ಮುಂಬೈ ಪ್ರಾಂತ್ಯದ ಮರಾಠವಾಡ ದೇವನಿಯ ತವರೂರು. ಬೀದರ್, ಬಸವಕಲ್ಯಾಣ, ಭಾಲ್ಕಿ, ಲಾತೂರು, ಉಸ್ಮನಾಬಾದ್ ಇವೆಲ್ಲ ದೇವನಿ ಹೆಚ್ಚಾಗಿ ಕಂಡುಬರುವ ಪ್ರದೇಶಗಳು.

ದೇವನಿ ಮಧ್ಯಮಗಾತ್ರದ ಹೈನುಗಾರಿಕಾ ತಳಿ. ದೇವನಿಯನ್ನು ಅದರ ವರ್ಣವೈವಿಧ್ಯದ ಆಧಾರದಮೇಲೆ ೩ ವಿಭಾಗ ಮಾಡುತ್ತಾರೆ. ಅಚ್ಚ ಬಿಳಿಬಣ್ಣದ ಮೇಲೆ ಅಲ್ಲಲ್ಲಿ ಕಪ್ಪುಚುಕ್ಕಿಗಳಿರುವ ತಳಿಗೆ ಶೆವೆರಾ ಅಂತಲೂ, ಅಷ್ಟಾಗಿ ಚುಕ್ಕಿಗಳಿಲ್ಲದುದಕ್ಕೆ ಬಲಂಕ್ಯ ಅಂತಲೂ ಮುಖ ಪಾರ್ಶ್ವ ಕಪ್ಪಾಗಿರುವುದಕ್ಕೆ ವನ್ನೆರಾ ಅಂತಲೂ ಕರೆಯುತ್ತಾರೆ. ದೇವನಿಯ ಸಾಮಾನ್ಯ ಲಕ್ಷಣಗಳಾಗಿ, ಅಗಲವಾಗಿ ತೆರೆದುಕೊಂಡಂತಿರುವ ಉದ್ದ ಕಿವಿ, ಉಬ್ಬುಹಣೆ, ಹೊರಬಾಗಿರುವ ಕೋಡು ಇತ್ಯಾದಿಗಳನ್ನು ಪಟ್ಟಿಮಾಡಬಹುದು. ಚರ್ಮ ಜೋಲು ಹಾಗೂ ಮೃದು. ಅತಿಯಾದ ಸೂಕ್ಷ್ಮ ಸ್ವಭಾವದವು ಈ ದೇವನಿ ತಳಿಯ ಹಸುಗಳು.



ದೇವನಿ ಕರ್ನಾಟಕಮೂಲದ ತಳಿಗಳಲ್ಲೆ ಅತಿ ಹೆಚ್ಚು ಹಾಲು ಕೊಡುವ ತಳಿಯಾಗಿ ಗುರುತಿಸಲ್ಪಟ್ಟಿದೆ. ದಿನಕ್ಕೆ ಅಂದಾಜು ೭-೮, ಕೆಲವೊಮ್ಮೆ ಹತ್ತು ಲೀಟರ್ ಕೂಡ ಕೊಟ್ಟ ದಾಖಲೆಗಳಿವೆ. ಇಂದು ಭಾರತೀಯ ತಳಿಗಳಲ್ಲೆ ಅತಿ ಶೀಘ್ರವಾಗಿ ನಶಿಸುತ್ತಿರುವ ತಳಿಗಳಲ್ಲಿ ದೇವನಿ ಕೂಡ ಒಂದು. ದೇವನಿ ಹೆಚ್ಚಾಗಿ ಸಾಕಲ್ಪಡುತ್ತಿದ್ದ ಬೀದರ್ ಪ್ರದೇಶಗಳಲ್ಲೆ ಈಗ ಇವುಗಳ ಸಂಖ್ಯೆ ಕೆಲವು ನೂರು. ದೇವನಿ ಹಾಗು HF ನ cross breedಗಳು ಅತಿ ಹೆಚ್ಚು ಹಾಲು ಕೊಡುವ ತಳಿ ಸಂಶೊಧಿಸಲ್ಪಟ್ಟುದುದರಿಂದ ಶುದ್ಧ ದೇವನಿಗಳ ಸಂಖ್ಯೆ ದಿನದಿನಕ್ಕೂ ಕಡಿಮೆಯಾಗುತ್ತಿದೆ. ಹಳ್ಳಿಖೇಡದಲ್ಲಿರುವ ಹೈನುಗಾರಿಕಾ ಸಂಶೋಧನ ಸಂಸ್ಥೆಯಲ್ಲಿ ಇವುಗಳನ್ನು ರಕ್ಷಿಸಲಾಗುತ್ತಿದೆ.

ನಮ್ಮನ್ನು ಪ್ರಕೃತಿ ವಿಕೋಪಗಳಿಂದ ಪಾರುಮಾಡಿದ, ಮಾಡಬಲ್ಲ ಈ ಮುಗ್ಧ ಜೀವಗಳಿಗೆ ಪ್ರತಿಯಾಗಿ ಒಂದಿಷ್ಟು ರಕ್ಷಣೆ ಬೇಡವೆ?

**-ಮಧುಕೇಶ ದೊಡ್ಡೇರಿ**

ಕವನ

## ಪ್ರಾರ್ಥನೆ

ಕೋಟಿ ಸೂರ್ಯ ಪ್ರಭಾ ಪೂರ್ಣೆ ನಿನಗೆ ನಮ್ಮ ನಮನವು ।
ಮಾತೆಗೆ, ಭೂಮಾತೆಗೆ, ಗೋಮಾತೆಗೆ ನಮನವು ॥ ಪ ॥

ಕಾಯುವವರ ಕಾಯುವವಳೆ ತಾಯಿ ಪುಣ್ಯಕೋಟಿಯೆ ।
ಅನ್ನ ಕೊಡುವಾ ಅನ್ನಪೂರ್ಣೆಯೆ ನಿನಗೆ ಯಾರು ಸಾಟಿಯೆ? ॥
ಕಸವ ಕೂಡ ರಸ ಮಾಡುವ ಪರಮಾದ್ಭುತ ಗೀತೆಯೆ ।
ಪ್ರೀತಿಯೊಂದೆ ನೀತಿಯೆನುವ ಮಾತಿಲ್ಲದ ಮಾತೆಯೆ ॥ ೧ ॥

ಮಂಗಲಪ್ರದೆ ಮಂಗಳಾಂಗಿ ತಾಯೆ ಶುಭ ಮಂಗಳೆ ।
ಬಾಳಿನಂಧಕಾರ ಕಳೆವ ಹಾಲಿನ ಬೆಳದಿಂಗಳೆ ॥
ದೇವಲೋಕವನ್ನು ಮರ್ತ್ಯದಲ್ಲೆ ತೆರೆವ ಕಂಗಳೆ ।
ಯಾರಮ್ಮ ನಿನಗೆ ಸಮ ತಾಯೆ ಸರ್ವ ಮಂಗಳೆ ॥ ೨ ॥

ಬಲಿಯಾದರೆ ನೀನು ಇಡೀ ಲೋಕವೆಲ್ಲ ತಬ್ಬಲಿ ।
ಉಳಿದು ಉಳಿಸು ಮಕ್ಕಳನ್ನು ನಿನ್ನ ಕರುಣೆ ಕಾಯಲಿ ॥
ಕ್ಷೀರದಾತೆ, ಲೋಕಮಾತೆ ಅಮೃತ ಶರಧಿ ಜಾತೆಯೇ ।
ಪ್ರಾಣಿ ಎನ್ನಬಹುದೆ ನಿನ್ನ ಲೋಕ ಪ್ರಾಣದಾತೆಯೆ ॥ ೩ ॥

– **ಡಾ। ಎಚ್ ಎಸ್. ವೆಂಕಟೇಶ ಮೂರ್ತಿ**

## ಗೋಮಾತೆ

ದನಗಳ ಹಿಂಡು ಹಟ್ಟಿಯೊಳಿದ್ದರೆ
ಮನುಜರಿಗದೆ ಸಂಪತ್ತು
ಅನುದಿನ ಹಸಿರು ತಿನಿಸನು ಕೊಟ್ಟರೆ
ಜನರಿಗೆ ಬರದಾಪತ್ತು

ಹುಲ್ಲು ನೀರು ಹುರುಳಿಯ ತಿನಿಸಿರೆ
ಹೊಲವನು ಉಳುವುದು ಎತ್ತು
ಹಲತರ ಬೀಜವ ಆದರಲಿ ಬಿತ್ತಿರೆ
ಬೆಳೆವುದು ನಮಗೆ ತುತ್ತು

ಬಿಡದೆ ಸಗಣಿಯ ಕಲಸಿ ತುಂಬಿರೆ
ಅಡುಗೆಗೆ ಗೋಬರ ಗ್ಯಾಸು
ಬಿಡುವ ತ್ಯಾಜ್ಯವ ತೋಟಕೆ ಹಾಕಿರೆ
ಕೊಡುವುದು ಕೈತುಂಬ ಕಾಸು

ದೇಶದ ಜನರಿಗೆ ಶಕ್ತಿಯಹುದಾದರೆ
ದೇಶಿಕ ಆರುಹಿದ ಕೂಸು
ದೇಶದ ಏಳ್ಗೆಗೆ ದುಡಿಯುವಿರಾದರೆ
ದೇಶೀ ತಳಿಯೇ ಲೇಸು

– **ವಾಗ್ದೇವಿ ನೂಜಿ**

(ಕೃಪೆ: ಕಲಾದರ್ಶನ)

## ವಂದೇ ಗೋ ಮಾತರಂ

ಮಾತಶ್ಚತುರ್ದಶ ಭವತ್ಸಹಜಾನಿ ಮನ್ಯೇ
ರತ್ನಾನಿ ಯಾನಿ ಫಲಿತಾನಿ ಸುಧಾಸಮುದ್ರೇ ।
ಆಮ್ರೇಡಿತಾನಿ ತವ ತಾನಿ ವೃಥಾ ಯತಸ್ತ್ವಂ
ಸರ್ವೈರ್ ಅನನ್ಯಸುಗುಣೈಃ ಕಿಲ ಕಲ್ಪಿತಾಸಿ ॥

ಪಾದಾಸ್ತವಾಂಬ ಜಗದಾಲಯ ಭಾರಹಾರ –
ಸ್ತಂಭಾಶ್ಚಿರಂ ಸಕಲಸತ್ತ್ವವತಾಂ ಶರಣ್ಯಾಃ ।
ಊಧಶ್ಚತುಷ್ಟಯವಿಸೂಚಿತವಿಶ್ವಧಾತ್ರೀ –
ವೀಪ್ಸಾತ್ಮಿಕೇ ಪುನರಯೋಗ್ಯಸುತಾನ್ ದಯಸ್ವ ॥

ಪಾವಿತ್ರ್ಯಗಾಂಗಲಹರೀ ತವ ನೇತ್ರಸೋಮಾತ್
ಕಾರುಣ್ಯಯಾಮುನಝರೀ ತವ ಲೋಕನಾರ್ಕಾತ್ ।
ಸಾರಸ್ವತಸ್ರುತಿರಥಾನನಹವ್ಯವಾಹಾ –
ನ್ನಿರ್ಯಾಂತಿ ಯಾ ನನು ಪುನಂತಿ ಜಗಂತಿ ಮಾತಃ ॥

– **ಶತಾವಧಾನಿ ಡಾ। ರಾ. ಗಣೇಶ**

## ವಾತ್ಸಲ್ಯಧಾರೆ

ಹಾಲನ್ನೂಡುತ
ಹಸಿವೆಯ ದೂಡುವ
ಅಂದದ
ದನ, ಕರು ಚಿತ್ರ
ಕೊಡುವ, ಪಡೆವ
ತಾಯಿ–ಕಂದ
ಬದುಕಿನೊಂದು
ಪವಿತ್ರ ಬಂಧ
ವಾತ್ಸಲ್ಯ ಸೂತ್ರ

– **ಪ್ರೊ। ಹರಿನಾರಾಯಣ ಮಾಡಾವು**

## ಚುಟುಕ

ಗೋವನು ಸಲಹಿರಿ ಪ್ರತಿಫಲವುಂಟು
ಅದು ಮನುಜನ ಪಾಲಿಗೆ ದೇವರ ಗಂಟು
ಗೋವಿಗು ಮನುಜಗು ಬಿಡಿಸದ ನಂಟು
ದೊರಕುವ ಲಾಭವು ನೂರಾರುಂಟು

ಗೋಮೂತ್ರದಲ್ಲಿದೆ ಅದ್ಭುತ ಮದ್ದು
ಕ್ಯಾನ್ಸರ್ ರೋಗವು ಓಡಿತು ಬಿದ್ದು
ಗೋಮಯದಿಂದ ವಿಧವಿಧ ಸೋಪು
ಬಳಸಿರಿ ನೋಡಿ ಅಪ್ಪಟ ಶಾಂಪು

– **ವಿಜಯಾ ಸುಬ್ರಹ್ಮಣ್ಯ**

# ಕೃಷಿ ಕಾರ್ಯದಲ್ಲಿ ಗೋವಿನ ಬಳಕೆ ಹಿಂದೆ ಹೇಗಿತ್ತು? ಈಗ ಹೇಗಿದೆ? ಏನಾಗಬೇಕಾಗಿದೆ?

ಭಾರತ ಕೃಷಿ ಪ್ರಧಾನ ದೇಶವಾಗಿದ್ದು ೭೦ ಪ್ರತಿಶತ ಜನರು ಜೀವನೋಪಾಯಕ್ಕಾಗಿ ಬೇಸಾಯವನ್ನೇ ದಾರಿಯನ್ನಾಗಿಸಿಕೊಂಡವರು ಮತ್ತು ಈ ಕೃಷಿಯ ಮೂಲಾಧಾರವೇ ಗೋವು ಆಗಿತ್ತು ಎಂದರೆ ತಪ್ಪಾಗಲಿಕ್ಕಿಲ್ಲ. ಎಲ್ಲಿಯವರೆಗೆ ಗೋವಿನ ವಿಕಾಸ, ಸಂವರ್ಧನೆ ಮತ್ತು ಪೂಜೆ ನಡೆಯುತ್ತಿತ್ತೋ ಅಲ್ಲಿಯವರೆಗೆ ನಾವು ಆರ್ಥಿಕ ಮತ್ತು ಸಾಮಾಜಿಕ ಹಾಗೂ ಆಧ್ಯಾತ್ಮಿಕ ದೃಷ್ಟಿಯಲ್ಲಿ ಮೇರುಸ್ಥಾನದಲ್ಲಿದ್ದೆವು. ಈ ಭರತಭೂಮಿಯನ್ನು ಇಡೀ ಜಗತ್ತು 'ಸ್ವರ್ಣಭೂಮಿ' ಎಂದೇ ಗುರುತಿಸುತ್ತಿತ್ತು. ಭಾರತೀಯ ಕೃಷಿಯ ವಿಕಾಸದಲ್ಲಿ ಗೋವಂಶದ ಪಾತ್ರ ಅತ್ಯಂತ ಮಹತ್ವಪೂರ್ಣವಾಗಿತ್ತು.

ಭಾರತದಲ್ಲಿ ಕೃಷಿ ಕೇವಲ ವ್ಯವಸಾಯವಾಗಿರದೆ, ಅದು ಒಂದು ಸಂಸ್ಕೃತಿ ಮತ್ತು ಜೀವನ ದೃಷ್ಠಿಯೇ ಆಗಿತ್ತು. ಆದರೆ ಇತ್ತೀಚಿನ ದಶಕಗಳಲ್ಲಿ ಯಾಂತ್ರಿಕತೆಗೆ ಮಾರು ಹೋಗಿ ಗೋವಿನ ಬಳಕೆ ಕೃಷಿಯಲ್ಲಿ ಕಡಿಮೆಯಾಗಿ ಹಸಿರು ಕ್ರಾಂತಿ ಹೆಸರಲ್ಲಿ ರಾಸಾಯನಿಕ ಗೊಬ್ಬರಗಳ ಬಳಕೆ ಹಾಗೂ ಕೀಟನಾಶಕಗಳ ಬಳಕೆ ವಿಪರೀತವಾಗಿದೆ. ರಾಸಾಯನಿಕ ಗೊಬ್ಬರಗಳ ಉಪಯೋಗದಿಂದ ಆರಂಭದಲ್ಲಿ ಹೆಚ್ಚು ಬೆಳೆ ಬೆಳೆದರು. ನಿಧಾನವಾಗಿ ಅದು ಭೂಮಿಯ ಫಲವತ್ತತೆಯನ್ನು ಹೆಚ್ಚಿಸುವ ಸೂಕ್ಷ್ಮಾಣು ಜೀವಿಗಳ ಬೆಳವಣಿಗೆಯನ್ನು ಕುಂಠಿತಗೊಳಿಸಿ ಮತ್ತು ನಾಶ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುವುದನ್ನು ಅನೇಕ ಕೃಷಿಕರು ಅನುಭವದಿಂದ ಕಂಡುಕೊಂಡಿದ್ದಾರೆ.

ಆಧುನಿಕ ಕೀಟನಾಶಕಗಳು ಬೆಳೆಗೆ ಹಾನಿ ಮಾಡುವ ಕೀಟಗಳನ್ನು ನಾಶ ಮಾಡುವ ಜೊತೆಗೇ ಬೆಳೆಗಳಿಗೆ ಉಪಕಾರಿಯಾದ ಭೂಮಿಗೆ ಉಪಕಾರಿಯಾದ ಕೀಟಗಳನ್ನೂ, ಜೀವಿಗಳನ್ನೂ ನಾಶಮಾಡುತ್ತದೆ. ಜೊತೆಗೆ ಈ ರಾಸಾಯನಿಕಗಳು ಬೆಳೆಯೊಡನೆ ಬೆರೆತು, ಅದನ್ನೇ ಆಹಾರ ರೂಪದಲ್ಲಿ ನಾವು ಸೇವಿಸುತ್ತೇವೆ. ಈ ರಾಸಾಯನಿಕಗಳು ನಮ್ಮ ರೋಗನಿರೋಧಕ ಶಕ್ತಿಯನ್ನು ಕಡಿಮೆ ಮಾಡುವುದಲ್ಲದೆ ಹೃದಯ, ರಕ್ತ, ಯಕೃತ್ತು, ಮೆದುಳು ಇತ್ಯಾದಿ ಪ್ರಮುಖ ಅಂಗಗಳಿಗೆ ಹಾನಿ ಮಾಡಿ ತನ್ಮೂಲಕ ನಾವು ಅನೇಕ ರೋಗಗಳ ಆಗರವಾಗಲು ನಾವಿಂದು ಬೆಳೆಗಳಿಗೆ ಬಳಸುವ ಕೀಟನಾಶಕಗಳು, ರಾಸಾಯನಿಕ ಗೊಬ್ಬರಗಳು ಕಾರಣವಾಗಿವೆ. ಜೊತೆಗೇ ರಾಸಾಯನಿಕಗಳ ಅತಿಯಾದ ಬಳಕೆಯಿಂದ ಭೂಮಿ ನಿಸ್ಸತ್ತ್ವವಾಗಿ ಬರಡಾಗುವುದನ್ನು ನಾವಿಂದು ಕಾಣುತ್ತಿದ್ದೇವೆ. ಆಧುನಿಕ ಕೃಷಿಯಲ್ಲಿ ಈ ರೀತಿ ಬರಡಾದ ಭೂಮಿಯನ್ನು ಜೀವಂತವಾಗಿಸಲು ಯಾವುದೇ ವ್ಯವಸ್ಥೆಯಿಲ್ಲ. ಇದರ ಜೊತೆಗೆ ರಾಸಾಯನಿಕ ಗೊಬ್ಬರದ ಅಬ್ಬರಕ್ಕೆ ಸಿಲುಕಿ ಪಾರಂಪರಿಕ ಅರ್ಥಾತ್ ಗೋ ಆಧಾರಿತ ಕೃಷಿ ಪದ್ಧತಿಯನ್ನು ಮರೆತದ್ದು ಕೂಡ ನಮ್ಮ ಕೃಷಿಕರ ದುರಂತವೆಂದರೆ ತಪ್ಪಾಗಲಾರದು. ಬಹಳ ಕುಗ್ರಾಮಗಳೂ ಇಂದು ಆಧುನಿಕ ಕೃಷಿ ಪದ್ಧತಿಯ ಮೇಲೆ ಅವಲಂಬಿತವಾಗಿದೆ. ೭೦% ಕೃಷಿಕರೇ ಇರುವ ದೇಶದಲ್ಲಿ ಈ ಬಗ್ಗೆ ಗಂಭೀರವಾಗಿ ಚಿಂತಿಸಲೇಬೇಕಾಗಿದೆ.

ಕೃಷಿಯಲ್ಲಿ ಪಾರಂಪರಿಕ ಪದ್ಧತಿಯ ಬಳಕೆ ಅತ್ಯಂತ ಅವಶ್ಯ. ಗೋಮಯವನ್ನು ಬಳಸಿ ಅನೇಕ ರೀತಿಯ ಗೊಬ್ಬರಗಳ ತಯಾರಿ, ಪರಿಣಾಮಕಾರಿ ಬಳಕೆ ತನ್ಮೂಲಕ ಭೂಮಿಯ ಫಲವತ್ತತೆಯನ್ನು ಹೆಚ್ಚು ಮಾಡುವುದರ ಜೊತೆಗೆ ಕೀಟನಾಶಕದ ಬದಲಾಗಿ, ಗೋಮಯ, ಗೋಮೂತ್ರ ಇತ್ಯಾದಿಗಳಿಂದ ತಯಾರಿಸಿದ ಸಾವಯವ ಕೀಟನಿಯಂತ್ರಕವನ್ನು ಬಳಸುವ ಅಗತ್ಯವಿದೆ. ರಾಸಾಯನಿಕ ಗೊಬ್ಬರಗಳ, ಇನ್ನಿತರ ರಾಸಾಯನಿಕ ವಸ್ತುಗಳ ಅತಿಯಾದ ಬಳಕೆಯಿಂದ ಬರಡಾದ ಭೂಮಿಯ ಫಲವತ್ತತೆಯನ್ನು ಪವಿತ್ರ ಭಾರತೀಯ ಗೋವಿನ ಉತ್ಪನ್ನಗಳನ್ನು ಬಳಸಿ ಹೆಚ್ಚಿಸಬೇಕಾಗಿದೆ. ಪಂಚಗವ್ಯವನ್ನು ಬಳಸಿ ಕೃಷಿಯಲ್ಲಿ ಉತ್ತಮ ಫಲಿತಾಂಶ ಕಂಡುಕೊಂಡವರಿದ್ದಾರೆ. ಹಿಂದಿನ ಕಾಲದಲ್ಲಿ ಬೆಳೆಗಳ ಬೀಜಗಳನ್ನು ಸಂರಕ್ಷಿಸಿಡಲು ಯಾವ ರೀತಿ ಗೋಮಯವನ್ನು ಬಳಸುತ್ತಿದ್ದರೋ ಅದೇ ರೀತಿ ಬೀಜೋಪಚಾರಕ್ಕೆ ಗೋಮಯವನ್ನು ಮತ್ತೆ ಬಳಸಬೇಕಾದ ಆವಶ್ಯಕತೆ ಇದೆ. ಮನೆಮನೆಗಳಲ್ಲಿ ಕನಿಷ್ಠ ಎರಡಾದರೂ ಭಾರತೀಯ ಗೋವಂಶವನ್ನು ಸಾಕಿ, ಸಲಹಿದರೆ ಅವುಗಳೇ ನಮ್ಮನ್ನು ಸಾಕಿ ಸಲಹುತ್ತವೆ.

ಆಧುನಿಕ ತಂತ್ರಜ್ಞಾನವನ್ನು ಬಳಸಿ ಕೃತಕ ವಸ್ತುಗಳನ್ನು ಬಳಸಿ 'ಹಸಿರು ಕ್ರಾಂತಿ' ಆರಂಬಿಸಿದ ಪಶ್ಚಿಮ ದೇಶಗಳು ಇಂದು ಆ ಪದ್ಧತಿಯ ಹಿನ್ನಡೆಯನ್ನು ಮನಗಂಡು ಭಾರತದ ಪಾರಂಪರಿಕ ಕೃಷಿ ಪದ್ಧತಿಯೆಡೆಗೆ ಆಕರ್ಷಿತರಾಗುತ್ತಿದ್ದಾರೆ.

ಗೋಮಯ, ಗೋಮೂತ್ರ ಇತ್ಯಾದಿಗಳನ್ನು ಬಳಸಿ ಸಾವಯವ ಕೃಷಿ ಮಾಡುವುದರಿಂದ ಅನೇಕ ಪರಿಣಾಮಕಾರಿ ಬದಲಾವಣೆಗಳನ್ನು ನಾವು ಕಾಣಬಹುದು. ಸಾವಯವ ಕೃಷಿ ಪದ್ಧತಿ ಭೂಮಿಯನ್ನು ಚಲನಶೀಲವಾಗಿಟ್ಟು, ಜೀವಂತಿಕೆಯ ಚಟುವಟಿಕೆಗಳನ್ನು ನಡೆಸಿ ಭೂಮಿಯನ್ನು ಪರಿಣಾಮಕಾರಿ ಆರೋಗ್ಯದಿಂದ ಇಡುವುದರ ಜೊತೆಗೇ ವಾತಾವರಣವನ್ನು ಕಲುಷಿತಗೊಳಿಸದೆ, ಪರಿಸರದಲ್ಲಿ ಸಮತೋಲನವನ್ನು ಕಾಯ್ದುಕೊಂಡು, ನೀರು ಗಾಳಿಯನ್ನು ಪ್ರದೂಷಣಗೊಳಿಸದೆ ಇರುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆಧುನಿಕ ಕೃಷಿ ಪದ್ಧತಿಗೆ ಹೋಲಿಸಿದಾಗ ಈ ಪದ್ಧತಿ ಸ್ವಸಾಮರ್ಥ್ಯ, ಸ್ವಶಕ್ತಿ ಹಾಗೂ ಪರಾವಲಂಬಿಯಾಗದ ಸ್ವಾವಲಂಬಿ ಕೃಷಿ ಪದ್ಧತಿಯಾಗಿದೆ. ಆಕಳು ಇದ್ದಲ್ಲಿ ಅದರ ಗೋಮಯ ೫ ಎಕರೆ ಕೃಷಿಗೂ, ಗೋಮೂತ್ರ ೧೦ ಎಕರೆ ಕೃಷಿಗೂ ಸಾಕಾಗುತ್ತದೆ ಎಂದು ಸಾವಯವ ಕೃಷಿತಜ್ಞರ ಅನುಭವದ ಮಾತು. ಮಣ್ಣಿನ ಪ್ರತಿ ಗ್ರಾಮಿನಲ್ಲಿ ೧೦ ಕೋಟಿ ಬ್ಯಾಕ್ಟೀರಿಯಾಗಳಿರುತ್ತವೆ. ಈ ಬ್ಯಾಕ್ಟೀರಿಯಾಗಳು ಶಕ್ತಿಶಾಲಿಯಾಗಿ ಕೆಲಸ ಮಾಡಲು, ಗೋಮಯದಿಂದ ತಯಾರಿಸಿದ ಸಾವಯವ ಗೊಬ್ಬರ, ಎರೆ ಗೊಬ್ಬರ, ಹಸಿರೆಲೆ ಗೊಬ್ಬರ –ಇತ್ಯಾದಿ ಸಹಯೋಗವನ್ನು ನೀಡುತ್ತವೆ. ತನ್ಮೂಲಕ ಭೂಮಿಯ ಫಲವತ್ತತೆ ಹೆಚ್ಚಾಗುತ್ತದೆ.

(ಕೃಪೆ: ಧರ್ಮಭಾರತೀ)